**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ**

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

**2025-26 ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ - 1**

**ವಿಷಯ: ಕನ್ನಡ (01)** **ಗರಿಷ್ಠ ಅಂಕಗಳು: 80**

**ಸಮಯ: 3 ಗಂಟೆಗಳು** **ಒಟ್ಟು ಪ್ರಶ್ನೆಗಳ ಸಂಖ್ಯೆ: 52**

---

**ಸೂಚನೆ: ೧. "ಅ-ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

## ಅ-ವಿಭಾಗ

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. (10x1=10)**

1. ರಾವಣನಿಗೆ ಯಾರ ಬಗ್ಗೆ ವೈರಾಗ್ಯ ಮೂಡಿತು?

   ಅ) ಮಂಡೋದರಿ ಆ) ಬಹುರೂಪಿಣಿ

   ಇ) ಸೀತೆ ಈ) ರಾಮ

2. ಗುರು ಹೇಗೆ ವರ್ತಿಸಬಾರದು?

   ಅ) ಶರಣನಂತೆ ಆ) ಗುರುವಿನಂತೆ

   ಇ) ಲಘುವಾಗಿ ಈ) ಜಂಗಮನಾಗಿ

3. ಹಗೆಯನ್ನು ಏನೆಂದು ಉಪೇಕ್ಷಿಸಬಾರದು?

   ಅ) ಶತ್ರುವೆಂದು ಆ) ಬಾಲಕನೆಂದು

   ಇ) ತೃಣವೆಂದು ಈ) ಚಿಗುರೆಂದು

4. "ತನ್ನಿಂದ ಉಪಕಾರ ತೊಟಕಾದರೂ ಇಲ್ಲ, ಬಿನ್ನಾಣದ ಮಾತಿಗೆ ಕೊನೆಯಿಲ್ಲ" ಎಂದು ಪುರಂದರ ದಾಸರು ಹೇಳಿರುವ ಮಾತಿನ ಭಾವವೆಂದರೆ......

   ಅ) ದುರ್ಜನರು ಉಪಕಾರ ಮಾಡದೆ ಬಿನ್ನಾಣದ ಮಾತಾಡುತ್ತಾರೆ.

   ಆ) ಬಿನ್ನಾಣದ ಮಾತನ್ನಾಡಿದರೂ ಉಪಕಾರಿಯಾಗಿರುತ್ತಾರೆ.

   ಇ) ಉಪಕಾರ ಮಾಡುವುದು ಬಿನ್ನಾಣದ ಮಾತಿನವರ ಸ್ವಭಾವ

   ಈ) ದುರ್ಜನರು ಸಮಾಜಮುಖಿ ಕೆಲಸದಲ್ಲಿ ನಿರತರಾಗಿರುತ್ತಾರೆ.

5. ಯಾವುದಕ್ಕೆ ಸೆಳವಿದೆಯೆಂದು ಕವಿ ಹೇಳುತ್ತಾರೆ?

   ಅ) ಜೀವನದ ನದಿಗೆ ಆ) ಎಳ ನಗೆಗೆ

   ಇ) ಬಾನಿಗೆ ಈ) ಭೂಮಿಗೆ


Visit CollegeDekho

6. ಕೊನೆಗೆ ಬಸಲಿಂಗ ಯಾವುದರಿಂದ ಮುಕ್ತನಾಗಿದ್ದ?

ಅ) ಸುಳ್ಳುಗಳಿಂದ ಆ) ಜಾತಿ ಭಾವನೆಯಿಂದ

ಇ) ಕಣ್ಣು ನೋವಿನಿಂದ ಈ) ಹತಾಶೆಯಿಂದ

7. " ಒಂದು ರಾಜ್ಯದ ಎಲ್ಲ ಸೌಲಭ್ಯಗಳನ್ನೂ ಬಳಸಿಕೊಂಡು ಬದುಕುವ ಜನ ಅಲ್ಲಿನ ಭಾಷೆಯನ್ನೂ ಬಳಸುವುದು ಅನಿವಾರ್ಯವಾಗುತ್ತದೆ." ಎಂಬ ಹಾ.ಮಾ. ನಾಯಕರ ಮಾತಿನ ಆಶಯವೆಂದರೆ.....

ಅ) ಹೊರ ರಾಜ್ಯದಿಂದ ಬಂದು ನೆಲೆಸಿದವರು ಇಲ್ಲಿನ ಭಾಷೆ ಕಲಿಯಬೇಕು.

ಆ) ಹೊರ ರಾಜ್ಯದವರು ತಮ್ಮ ಮಾತೃಭಾಷೆಯಲ್ಲೇ ವ್ಯವಹರಿಸಬಹುದು.

ಇ) ಹೊರ ರಾಜ್ಯದ ವಲಸಿಗರಿಗೆ ಸ್ಥಳೀಯ ಭಾಷಾ ಕಲಿಕೆ ಅನಿವಾರ್ಯವಲ್ಲ.

ಈ) ಹೊರ ರಾಜ್ಯದವರು ಯಾವ ಭಾಷೆಯಲ್ಲಾದರೂ ವ್ಯವಹರಿಸಬಹುದು.

8. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?

ಅ) ಶೃಂಗೇರಿ ಮಠ ಆ) ಗೂಳೂರು ಮಠ

ಇ) ರಂಭಾಪುರಿ ಮಠ ಈ) ಸಿದ್ದಗಂಗಾ ಮಠ

9. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದನು?

ಅ) ಅರಣ್ಯದಲ್ಲಿ ಆ) ಶಿಕಾರಿ ಗಂಡಿಯಲ್ಲಿ

ಇ) ಮರದ ಮೇಲೆ ಈ) ಬೇಲಿಯ ಬುಡದಲ್ಲಿ

10. "ಇದ್ದಿದ್ದನ್ನು ನಡಸ್ಕೊಂಡು ಹೋಗೋದೆ ಕಷ್ಟ ಆಗಿದೆ. ಜನಗಳ ವಿಶ್ವಾಸನೂ ಉಳಿಸ್ಕೊಂಡು, ಕುರ್ಚೀನೂ ಉಳಿಸಿಕೊಂಡು ಟರ್ಮು ಮುಗಿಸಿದರೆ ಸಾಕಾಗಿದೆ ನನಗೆ" ಎಂಬ ಖಾನ್ ಸಾಹೇಬರ ಮಾತಿನ ಮರ್ಮವೆಂದರೆ......

ಅ) ಅಧಿಕಾರ ಉಳಿದರೆ ಸಾಕು

ಆ) ನಿವೃತ್ತಿಯ ಬಯಕೆ

ಇ) ವಿರೋಧ ಪಕ್ಷದವರ ಬಗ್ಗೆ ಭಯ

ಈ) ಅಧ್ಯಕ್ಷಗಿರಿಯೆಂಬುದು ಸರಾಗ

**(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.**
**(5x1=5)**

( ವಾತ್ಸಾಯನ, ಕುದುಪನಿಗೆ, ಪೆನ್‌ಶನ್ ದಾರರಿಗೆ, ನಿಶಾಶರ್ಮ, ಶಿವಸುಬ್ರಹ್ಮಣ್ಯ ಅಯ್ಯರ್, ಅಬ್ದುಲ್ ಕಲಾಂ )

11. ದುರಾಸೆಯ ಹುಡುಗನನ್ನು ನಿರಾಕರಿಸಿದವರು ..........................

12. ಧಣಿಗಳು ಹೊಳೆಯ ಹೂಳೆತ್ತಲು ಸೂಚಿಸಿದ್ದು ..........................

13. ........................ .ಅವರು ಕಲಾಂ ಅವರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದರು.

14. ಶೇಷನು ರಾಮಾಯಣದ ಕಥೆಯನ್ನು ........................ನಿಗೆ ಹೇಳಿದನು.

15. ........................ ಬಾಯಿ ಚಪಲ ಜಾಸ್ತಿ ಇರುತ್ತದೆ.

**(ಇ) 16. ಹೊಂದಿಸಿ ಬರೆಯಿರಿ.** **(5x1=5)**

| | |
|---|---|
| (ಅ) ಪುಲಿಗೆರೆ ಸೋಮನಾಥ | ೧) ಚಿಟ್ಟೆ ಮತ್ತು ಜೀವಯಾನ |
| (ಆ) ಪುರಂದರದಾಸರು | ೨) ವ್ಯಕ್ತಿಪರ ಕವನಗಳು |
| (ಇ) ಕೆ. ಎಸ್. ನಿಸಾರ್ ಅಹಮದ್ | ೩) ಒಮ್ಮೆ ನಗುತ್ತೇವೆ |
| (ಈ) ಟಿ. ಯಲ್ಲಪ್ಪ | ೪) ಜಾನಪದ |
| (ಉ) ಸುಕನ್ಯಾ ಮಾರುತಿ | ೫) ಪುರಂದರ ವಿಠಲ |
| | ೬) ಸೋಮೇಶ್ವರ ಶತಕ |

## ಆ-ವಿಭಾಗ

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(3x2=6)**

17. ರಾವಣ ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೈಸಿದನು?
18. ವೀರ ಮತ್ತು ಯೋಗಿಗೆ ಯಾವ ಗುಣಗಳಿರಬೇಕು?
19. ಹುಸಿನಿದ್ದೆ ಸಾಕು, ಎದ್ದೇಳಿ ಎಂದು ಕವಿ ಬೇಂದ್ರೆ ಮಕ್ಕಳಿಗೆ ಹೇಳಲು ಕಾರಣವೇನು?
20. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(2x2=4)**

21. ಡಾ. ಚಂದ್ರಪ್ಪ ಬಸಲಿಂಗನಿಗೆ ಡಾ. ತಿಮ್ಮಪ್ಪನವರ ಬಗ್ಗೆ ನೀಡಿದ ಅಭಿಪ್ರಾಯವೇನು?
22. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?
23. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?
24. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(3x2=6)**

25. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು?
26. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?
27. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?
28. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ-ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** **(2x3=6)**

29. ಕಲಿ ಭೀಮನೇ ಮಿಡುಕುಳ್ಳ ಗಂಡನು.
30. ಬಂಗಾರ ನಿನಗೆ ಸ್ಥಿರವಲ್ಲ.
31. ಇನ್ನೊಂದು ಸೇರ್ಪಡೆ ಆ ಲೀಲಾಮಾತ್ರನಿಗೆ.

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** **(1x3=3)**

32. ಈ ಮುಟ್ಟುವಿಕೆ ನಾನು ಊಹಿಸದೆ ಇದ್ದದ್ದನ್ನು ಮಾಡಿದೆ.
33. 'ಈ ಅದೃಷ್ಟ ನಿನಗೂ ಇತ್ತಲ್ಲೆ?
34. ಕಬ್ಬುಮಂ ಕಂಡಲ್ತೆ ಕಚ್ಚಳಿಯನಿತ್ತರ್


Visit CollegeDekho

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** **(1x3=3)**

35. ಡ್ರೈವರಣ್ಣ ಎತ್ಲಾಗಿ ಹೋದ! ಇಲ್ಲೇ ಇದ್ದನಲ್ಲ!

36. ಮುನ್ಸಿಪಾಲ್ ಪ್ರೆಸಿಡೆಂಟಾಗಿ ಊರನ್ನು ಸ್ವಚ್ಛವಾಗಿಡೋದು ನಿಮ್ಮ ಕರ್ತವ್ಯ.

## ಈ-ವಿಭಾಗ

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **(2x4=8)**

37. ಪ್ರಮದವನದಲ್ಲಿ ರಾವಣ-ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

38. ಮಂಗಳಲಿಂಗದ ಮಹತ್ತ್ವವನ್ನು ಉರಿಲಿಂಗಪೆದ್ದಿ ಹೇಗೆ ವಿವರಿಸಿದ್ದಾರೆ?

39. ನಗರ ಜೀವನದ ಯಾಂತ್ರಿಕ ವಿವರಗಳು'ಮುಂಬೈ ಜಾತಕ' ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ.

40. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಮಂದೆಗೆಳೆಸಿದ ಪಾಪಿ ಕೌರವ

ನಂದು ಮುಂದಲೆವಿಡಿದು ಸೈಂಧವ

ಬಂದು ಬಳಿಕಾರಣ್ಯವಾಸದೊಳೆನ್ನನೆಳದೊಯ್ದ

ಇಂದು ಕೀಚಕ ನಾಯ ಕಾಲಲಿ

ನೊಂದೆ ನಾನೀ ಮೂರು ಬಾರಿಯೆ

ಬಂದ ಭಂಗವೆ ಸಾಕೆನುತ ಬಸವಳಿದಳಿಂದುಮುಖಿ

ಅ) ಮಂದೆಗೆಳೆಸಿದ ಪಾಪಿ ಯಾರು? **(1 ಅಂಕ)**

ಆ) ದ್ರೌಪದಿಯನ್ನು ಅರಣ್ಯವಾಸದಲ್ಲಿ ಎಳೆದೊಯ್ದವನಾರು? **(1 ಅಂಕ)**

ಇ) ದ್ರೌಪದಿ ಅನುಭವಿಸಿದ ಮೂರು ಅವಮಾನದ ಪ್ರಸಂಗಗಳು ಯಾವುವು? **(2 ಅಂಕ)**

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **(1x4=4)**

41. ಸಿಂಹಬಾಲದ ಕೋತಿಗಳು ಮತ್ತು ಹಾಡುಹಕ್ಕಿಗಳಿಗಾದ ಅನನುಕೂಲಗಳಾವುವು? ವಿವರಿಸಿ.

42. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **(1x4=4)**

43. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ.

44. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು.?

## ಉ-ವಿಭಾಗ

## (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **(4x2=8)**

45. ಕೆಳಗಿನ ಎರಡು ಪದಗಳಿಗೆ **ನಾನಾರ್ಥಗಳನ್ನು** ಬರೆಯಿರಿ.

ತೊರೆ, ಗುರು, ಕಲಿ

46. ಕೆಳಗಿನ ಎರಡು ಪದಗಳ **ಗುಣವಾಚಕಗಳನ್ನು** ಬರೆಯಿರಿ.

ಹುಸಿನಿದ್ದೆ, ಗೂಗೆಮರಿ, ಬೆಳ್ಳಿಲೋಟ


Visit CollegeDekho

47. ಕೆಳಗಿನ ಎರಡು ಕ್ರಿಯಾಪದಗಳ **ಧಾತುರೂಪಗಳನ್ನು** ಬರೆಯಿರಿ.

ನಿಂದರು, ಬಂದಿತು, ಕುಣಿದನು

48. ಕೆಳಗಿನ ಎರಡು **ಕ್ರಿಯಾಪದಗಳ** ಕಾಲವನ್ನು ಗುರುತಿಸಿ ಬರೆಯಿರಿ.

ಹಾಡುವಳು, ಕೇಳುತ್ತಾರೆ, ಹೋದರು

49. ಕೆಳಗಿನ ಎರಡು ಪದಗಳ **ವಿಭಕ್ತಿಗಳನ್ನು** ಹೆಸರಿಸಿ.

ಧುರದೊಳ್, ಮನೆಗೆ, ವಲ್ಲಭನ

50. ಕೆಳಗಿನ ಎರಡು ಪದಗಳ **'ತದ್ಭವ' ರೂಪ** ಬರೆಯಿರಿ.

ಶ್ರೀ, ಶಿರ, ರಾಯ

**(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. (1x4=4)**

51. ಮತದಾನದ ಮಹತ್ವ

**ಅಥವಾ**

ಕ್ರೀಡೆ ಮತ್ತು ನಮ್ಮ ಆರೋಗ್ಯ

**(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ. (1x4=4)**

52. ವಿಶ್ವನಾಥ ಬಿ.ಆರ್./ಶ್ವೇತಾ, ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ- ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ಸತೀಶ ಡಿ. / ವರ್ಷಾ, ಸರ್ಕಾರಿ ಪದವಿ ಪೂರ್ವ ಕಾಲೇಜು, ಬಣಕಲ್, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ- ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ಕಾಲೇಜಿನಲ್ಲಿ ಆಚರಿಸಿದ **ಕನ್ನಡ ರಾಜ್ಯೋತ್ಸವ**ವನ್ನು ಕುರಿತು ಪತ್ರ ಬರೆಯಿರಿ.

**ಅಥವಾ**

ಮಲ್ಲಿಕಾ/ಮಲ್ಲಿಕಾರ್ಜುನ, ನಂ. 34, ದ.ರಾ. ಬೇಂದ್ರೆ ರಸ್ತೆ, ಸಾಧನಕೇರಿ, ಧಾರವಾಡ- ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ರಸ್ತೆ ದುರಸ್ತಿ ಮಾಡಿಕೊಡುವಂತೆ ಕೋರಿ ಜಿಲ್ಲಾಧಿಕಾರಿಗಳು, ಧಾರವಾಡ-ಇವರಿಗೊಂದು ಪತ್ರ ಬರೆಯಿರಿ.

* * * * * * * *


Visit CollegeDekho